(59) 2

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು
ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

Registered No. B G 182

ಶ್ರೀ
ಗೋರಕ್ಷಣ
GORAKSHANA

15 ನೇ ವರ್ಷ | 1965 ನೇ ಮಾರ್ಚಿ 27 | March 1965

Help The Gorakshana

"ಗೋರಕ್ಷಣ"ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆಗೆ ಪ್ರಾಣದಯೆ, ಶಾಕಾಹಾರಾಭಿವೃದ್ಧಿ
ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರಪ್ರಧಾನ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ ; "ಗೋರಕ್ಷಣ"ಕ್ಕೆ ಲೇಖನಗಳನ್ನೂ
ಪ್ರೋತ್ಸಾಹ ಧನದನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಕಾಮಧೇನು ಪೂಜಾ

ಶ್ರೀ ಎಸ್.ತಿಮ್ಮಪ್ಪಯ್ಯಂಗಾರ್
ಶಾಸ್ತ್ರ ಪ್ರಥಮ ಪ್ರಚಾರ್ಯಸಭಾ
ಹೊಂಗನೂರು

(ಮುಂದುವರಿದುದು)

ಪುರಾಣಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞ ನಾದ ಏಲ್ಲೂನು ಹೀಗೆ ಬರೆದಿದ್ದಾನೆ—

'ಸೂರ್ಯನ ಶುಭ್ರ ಕಿರಣಗಳಲ್ಲಿ ಕೆಲವು ಬಣ್ಣದ ಕಿರಣಗಳು ಪದಾರ್ಥವನ್ನು ಜೀರ್ಣಮಾಡುತ್ತವೆ; ಉಳಿದ ಬಣ್ಣದ ಕಿರಣಗಳು ಪ್ರಕಾಶವನ್ನು ಕೊಡುತ್ತವೆ; ಪ್ರಕಾಶವನ್ನು ಕೊಡುವ ಕಿರಣಗಳು ಶುಭ್ರವಾಗಿರುತ್ತವೆ: ಜೀರ್ಣಮಾಡುವ ಕಿರಣಗಳು ಕಪ್ಪಾಗಿರುತ್ತವೆ: ಆದ್ದರಿಂದ ಕಪ್ಪುಗೋವು ತನ್ನಲ್ಲಿ ಎಲ್ಲಾ ಬಣ್ಣಗಳನ್ನೂ ಜೀರ್ಣಮಾಡುತ್ತಾ, ಸೂರ್ಯ ಕಿರಣಗಳನ್ನು ಆಕರ್ಷಿಸುತ್ತದೆ: ಇದೇ ಕಾರಣದಿಂದ ಅದು ಹಾಲಿನಲ್ಲಿ ವಿಶೇಷ ಶಕ್ತಿಯನ್ನು ಬಿಡುತ್ತದೆ; ಆ ಹಾಲನ್ನು ಕುಡಿದರೆ ಮಾನವನ ಸಂಬಂಧವಾದ ಅನೇಕ ರೋಗಗಳು ಗುಣವಾಗುತ್ತವೆ'.

ಭೂಲೋಕದಲ್ಲಿ ಮಾನವನಾಗಿ ಹುಟ್ಟಿ, ಅಂತ್ಯದಲ್ಲಿ ದೇಹತ್ಯಾಗ ಮಾಡಿದ ಜೀವಿಯು ತನ್ನ ಕರ್ಮಾನುಸಾರವಾಗಿ ಯಮಲೋಕಕ್ಕೆ ಹೋಗಿ ಫಲಾಫಲಗಳಿಗನುಗುಣವಾದ ಸ್ವರ್ಗವನ್ನೋ ನರಕವನ್ನೊ ಅದಕ್ಕಾಗಿ ಪುನರ್ಜನ್ಮವನ್ನೋ ಹೊಂದಲೇಬೇಕಾದುದು ವಿಧಿಯು ನಿಯಮ; ಅದುಂತೆ ಹೊಂಟ ಜೀವಿಯು ಯಾತನಾಪೀಡೆಯೆಂಬ ಮಾನವ ಪರಿಗೆ ಅಗಾಧೋಚ್ಚಂವಾದ ಶರೀರ ಹೊಂದಿ ಯಮಲೋಕಕ್ಕೆ ಹೋಗುವ ದಾರಿಯಲ್ಲಿ ಹಸು ಜೊತೆಜನೆ ವಿಶ್ರಾಂತಿವಾರಿ ಮುಳ್ಳು ಮೊನೆಗಳು ಮುಂತಾದವುಗಳಿಂದ ಭಯುಂಕರವಾಗಿ ದಾಟಲು ಕಷ್ಟವಾಗಿರುವ 'ವೈತರಣೀ' ಎಂಬ ನದಿಯೊಂದಿದೆ: ಆ ನದಿಯನ್ನು ದಾಟಿದ ಮೇಲೆಯೇ ಯಮಲೋಕದ ಮುಂದಿನ ಮಾರ್ಗ ಸಿಗುವುದು.

ಯಾವ ಮನುಷ್ಯನು ತಾನು ಒದುಕಿರುವಾಗಲೇ 'ಕಪಿಲೆ' ಎಂಬ ಉತ್ತಮ ವಾದ ಹಸುವನ್ನು ಯೋಗ್ಯನಾದ ಬ್ರಾಹ್ಮಣನಿಗೆ ದಾನ ಮಾಡಿದ್ದರೂ ಅಥವ ಅವನು ಸತ್ತ ದಿನವೋ, ಸತ್ತ ಹತ್ತು ದಿನಗಳೊಳಗಾಗಿ ಆತನಿಗೆ ಪರಲೋಕದಲ್ಲಿ ಸುಖ ಸಿಗಲಿಕ್ಕಾಗಿ ಕರ್ಮ ಮಾಡುವ ಆತನ ಪುತ್ರಾದಿಗಳಾದರೂ 'ಕಪಿಲಾ ಗೋವನ್ನು ದಾನಮಾಡಿದರೆ ಆ ಪುಣ್ಯ ಫಲವನ್ನು ಕೊಡಲು ವೈತರಣೀ ನದಿಯ ದಡದಲ್ಲಿ ಕಾದಿರುವ ದಿವ್ಯ ಲೋಕದ ಗೋವು ಈ ಜೀವಿಯನ್ನು ಅನಾಯಾಸವಾಗಿ ದಾಟಿಸುವುದು.

ಇಹಲೋಕದಲ್ಲಿ ಸಕಲ ಕಷ್ಟಗಳನ್ನು ಗರಿಹರಿಸಿ ಕೋರಿದ ಕೊರತೆಗಳನ್ನು ಸಲ್ಲಿಸುವುದು ದಾತೃವೇ ಅಲ್ಲದೇ ಸತ್ಕರ್ಮಾನಂತರವೂ ದುಃಖದಿಂದ ಪಾರುಗಾಣಿಸುವ 'ಗೋದಾನ'ವು ಎಲ್ಲಾ ದಾನಗಳಿಗಿಂತಲೂ ಉತ್ಕೃಷ್ಟವಾದುದೆಂದು ಪರಿಗಣಿತವಾಗಿದೆ.

ಕಪಿಲೆಯು ಹಸುವಿನ ಕುಪ್ಪದಿಂದ ಕೂಡಿದ ಧೂಪವು ಶಿವನಿಗೆ ಉತ್ಕೃಷ್ಟವಾದುದು; ಹಾಗೆಯೇ ಕಪಿಲೆಯು ಹಸುವಿನ ಕುಪ್ಪದ ದೀಪಗಳಿಂದ ಆರತಿ ಬೆಳಗಿದರೆ ಶಿವನಿಗೆ ಪ್ರೀತಿಯಾಗುವುದು (ಧರ್ಮ ಸಂದೇಶ ಪತ್ರಿಕೆಯಿಂದ ಸಂಗ್ರಹಿಸಿದೆ)

★

(ಮುಂದುವರಿಯುವುದು)

ಹೀರು ನಿಲ್ಲುತ್ತಿದೆ

ಮೈಸೂರು— ವಿದ್ಯುಚ್ಛಕ್ತಿ ಕಾವುಗಾರಿ ನಡೆಸಬೇಕಾದ ಶ್ರಯುಕ್ತ ಪಿದ್ಯುಕ್ ಸಂಬರಾಜು ನಿಲ್ಲಿಸುವುದರಿಂದ ಈ ಲಾಗಾಯ್ತು ಪ್ರತಿ ಭಾನುವಾರ ಮುಂದೆ ತಿಳಿಸುವವರೆಗೆ ಮೈಸೂರು ನಗರದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ನೀರಿನ ಸರಬರಾಜು ನಿಲ್ಲಿಸಲಾಗುತ್ತೆ; ವಿನಿವಾಸಿಗಳು ಸಾಕಷ್ಟು ನೀರನ್ನು ಮುಂಗಡವಾಗಿ ಶೇಖರಿಸಿಕೊಂಡು ಸಹಕರಿಸಬೇಕಾಗಿ ಮುನಿಸಿಪಲ್ ಕಮಿಷನರವರು ತಿಳಿಸಿರುತ್ತಾರೆ.

ಭಾರತಕ್ಕೆ ಗಾಬರಿ ಮತ್ತು ವಿಷಾದ

ನವದೆಹಲಿ— ವಿಯಟ್ನಾಮಿನಲ್ಲಿ ಅಮೇರಿಕಾ ವಿಷವಾಯು ಪ್ರಯೋಗಿಸಿದ್ದು ಭಾರತಕ್ಕೆ ಗಾಬರಿ ಮತ್ತು ವಿಷಾದ ಉಂಟುಮಾಡಿರುವುದೆಂದೂ ಇನ್ನು ಹಾಗೆ ಮಾಡಬಾರದೆಂದೂ ಅಮೇರಿಕಾಕ್ಕೆ ತಿಳಿಸಲಾಗಿದೆಯೆಂದು ಲೋಕಸಭೆಯಲ್ಲಿ ಹೇಳಲಾಗಿದೆ.

300 ಮೈಲಿಗಳ ಗಡಿ

ರಾವಲ್ಪಿಂಡಿ— ಚೀನಾ ಮತ್ತು ಪಾಕಿಸ್ತಾನಗಳು 300 ಮೈಲಿ ಗಡಿ ಏರ್ಪಡಿಸಿಕೊಂಡು ಸಾಂಸ್ಕೃತಿಕ ಒಪ್ಪಂದಕ್ಕೆ ರಾಜುಮಾಡಿಕೊಂಡವು.

ಭಾರತಕ್ಕೆ ಬೆಂಬಲ

ಕೂಲಂಬೊ— ಭಾರತ-ಚೀನಾ ಗಡಿ ವ್ಯವಸ್ಥೆಗೆ ಏಲೋನು ಭಾರತಕ್ಕೆ ಬೆಂಬಲಿಸಿ ಪ್ರಯತ್ನಿಸುವುದಾಗಿ ಏಲೋನಿನ ಹೊಸ ಸರ್ಕಾರದ ಹೊಸ ಪ್ರಧಾನಿ ಡಡ್ಲೆ ಸೆನನಾಯಕೆ ಹೇಳಿದರು.

ಕಾಕ್ಯಲೆಂಡರು ಹರಿದುಹಾಕಿದರು

ಪಾಟ್ನಾ— ಶಾಸನಸಭಾ ಸದಸ್ಯನಿಗೆ ಹಂಚಲಾಗಿದ್ದ ಬೀಹಾರು ಕೈಮಗ್ಗ ಸಹಕಾರ ಸಂಘದ ಇಂಗ್ಲೀಷಿನ ಕಾಕ್ಯಲೆಂಡರನ್ನು ಸಭೆಯಲ್ಲಿ ಎಸ್ಪಿಸ್ಪಿ ಸದಸ್ಯ ರಾಮ ಸೇವಕ ಸಿಂಗ್ ಹರಿದುಹಾಕಿದರು.

GORAKSHANA

Statement of Ownership and other particulars

Place of Publication	Mysore
Periodicity of its publication	Monthly
Printer's Publisher's, Editor's name	M. S. Krishna Rao
Address	1067 Chamarajapuram, Mysore
Owner of the Newspaper	M. S. Krishna Rao

I, M. S. Krishna Rao hereby declare that the particulars given above are true to the best of my knowledge and belief.

Dated 27-3-65 — M. S. Krishna Rao
Signature of Publisher

ದಯವಿಟ್ಟು ಚಿರತ ಚರ್ಮಡ ಅಂಗಿಯನ್ನು ಧರಿಸಬೇಡಿ

★

ಜಗತ್ತಿನಾನ್ಯಂತ ವನ್ಯಮೃಗಗಳನ್ನು ನಾಶಗೊಳಿಸುವುಗಳ ವಿರುದ್ಧ ಹೋರಾಟ ನಡೆಸುವವರಲ್ಲಿ ಪಶ್ಚಿಮ ಜರ್ಮನಿಯ ಫ್ರಾಂಕ್‌ಫರ್ಟ್ ನಗರದ ಪ್ರೊಫೆಸರ್ ಬರ್ನಾರ್ಡ್ ಗ್ರಿಜ್‌ಮೆಕ್ ಅಗ್ರಗಣ್ಯರು : ಆಫ್ರಿಕಾದ ಕಾಡುಗಳಿಗೆ ತಂಡ ತಂಡವಾಗಿ ಬೇಟೆಗಾರರು ಹೋಗಿ, ಅಲ್ಲಿನ ವನ್ಯಶ್ರೀಯನ್ನೂ ಜಂತುಗಳನ್ನೂ ನಾಶಪಡಿಸುವುದನ್ನು ಅವರು ತೀವ್ರವಾಗಿ ಆಕ್ಷೇಪಿಸಿದ್ದಾರೆ.

ಈ ಕಾರ್ಯಕ್ಕಾಗಿ ಅವರು ಒಂದೆರಡು ಚಿತ್ರಗಳನ್ನು ತಯಾರಿಸಿ ವಿಶ್ವದಾದ್ಯಂತ ಪ್ರದರ್ಶಿಸಿದರು : ದಿನದಿನಕ್ಕೂ ನಶಿಸಿಹೋಗುತ್ತಿರುವ ಮೃಗಜಾತಿಗಳಲ್ಲಿ ಚಿರತೆಯೂ ಒಂದು : ಆದ್ದರಿಂದ ಅವರು 'ದಯವಿಟ್ಟು ಚಿರತೆಗಳ ಚರ್ಮದಿಂದ ತಯಾರಾದ ಅಂಗಿಗಳನ್ನು ಧರಿಸುವುದನ್ನು ನಿಲ್ಲಿಸಿ : ನೀವು ಅದನ್ನು ಹೆಚ್ಚು ಬೆಲೆ ಕೊಟ್ಟು ಕೊಳ್ಳುವಿರೆಂದೇ ಬೇಟೆಗಾರರು ಅವುಗಳನ್ನು ಕೊಲ್ಲುತ್ತಿದ್ದಾರೆ' ಎಂದು ಪಾಶ್ಚಾತ್ಯ ಮಹಿಳೆಯರಿಗೆ ಅವರು ಮನವಿ ಮಾಡಿಕೊಂಡಿದ್ದಾರೆ.

(ಯು ಪಿ ಎಸ್)

ಪ್ರಾಣಿ ವಧೆ ನಿಲ್ಲಲಿ

❋

ಮನುಷ್ಯನು ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಚತುರ್ವಾರ್ಥಗಳನ್ನು ಪಡೆದು ಲೋಕಕಲ್ಯಾಣಕ್ಕಾಗಿ ದುಡಿಯುವುದೇ ಧರ್ಮವೆಂದು ತಿಳಿದವರು ಸಡಿಸಡಿಗೆಗಳಿಂದ ಸಾಧಿಸಬೇಕು ; ಇದು ಎಲ್ಲ ಮಾನವ ಜನಾಂಗದ ಗುರಿಯಾಗಿದೆ ; ಆಗಲೇ ದೇಶದಲ್ಲಿ ನಾನಾ ವಿಧವಾದ ಕ್ರಾಂತಿಯು ಅಡಗಿ ಶಾಂತಿಯುತವಾಗುವುದು

ನಮ್ಮ ಭಾರತ ಸ್ವಾತಂತ್ರ್ಯದ ಶಾರುಣ್ಯದಲ್ಲಿ ಶ್ರೀ ಸ್ವಾಮಿ ವಿವೇಕಾನಂದರು ಧರ್ಮವನ್ನು ಪ್ರಕಾಶಗೊಳಿಸಿ ಭಾರತದ ಮೌಲಿಕನೆಯು ಥರ್ಮದ ಸ್ವಾತಂತ್ರ್ಯ ಸ್ಥಾಪನಾಚಾರ್ಯರಾದರು ; ಅವರಿಂದಾಗಿ ಪೂಜ್ಯ ಗಾಂಧಿಯವರು ಸತ್ಯಾಗ್ರಹವನ್ನು ಹೂಡಿ, ಸತ್ಯ ಶಾಂತಿ ದಯೆ ಸಮತ್ವ ಸುವಿಚಾರಗಳೆಂಬ ಗುಣಂತನ್ನು ತಿಳಿಸುವ ತ್ರಿವರ್ಣ ಧ್ವಜವನ್ನು ಎತ್ತಿಹಿಡಿದು, ಭಾರತದಲ್ಲಿದ್ದ ಪರಕೀಯ ಆಡಳಿತಕ್ಕೆ ಕೊಡಲೀಪೆಟ್ಟು ಹಾಕಿದರು : ಬಂಗಾಳಾದ ಕೇಸರಿ ಎಂಬ ಹೆಸರು ಪಡೆದಿದ್ದ ಶ್ರೀ ಸುಭಾಷ ಬೋಸರು ಭಾರತ ಸ್ವಾತಂತ್ರ್ಯವಾಗಲು ಪೂರ್ಣ ಶ್ರಮಿಸಿದರು.

ಆದರೆ ನಮ್ಮ ಭಾರತವು ಕಾವಿ ಬಿದ್ದರು ಕಾಕಿ ಧರಿಸಿದ್ದ ಮಹತ್ವ ವ್ಯಕ್ತಿಗಳ ಧೈರ್ಯ ಸಾಧನೆಯಿಂದ ಸ್ವತಂತ್ರವಾಯಿತು : ಮುಂದೂ ಸ್ವರಾಜ್ಯವನ್ನು ಸುಂದರ್ಯವಾಗಿ ನಡೆಸಲು ಈ ಮೂರೂ ತ್ಯಾಗದಿಂದ ದುಡಿಯಲೇಬೇಕಾಗಿದೆ. ಆಗ ಭಾರತಕ್ಕೆ ಜಗತ್ತಿನ ಶಕ್ತಿಯೂ ಬರಲಾರದು : ಒಳಹೊಂಗಿನ ಶಕ್ತಿ ನಿಗ್ರಹವಾಗಿ ಭಾವಾವೇಶಗಳಲ್ಲಿ ಅಕೃಷ್ಟ ಅನ್ನಕ್ಕಾಗಿ ಹೇಯವಾದ ಧೃಷ್ಟಾಚಾರ ನಿಮ್ಮೊಗಗಳ ನಿರ್ಗಾಲವಾಗಿ ತೊಡೆದುಹೋಗಿ ದೇಶದಲ್ಲಿ ಅಶೋಕನ ಧರ್ಮವು ಶಾಶ್ವತವಾಗಿ ಉಳಿಯುವುದು : ಸ್ವತಂತ್ರ ಭಾರತದಲ್ಲಿ ಗಿತ್ರಪಿದಯೆ ನಿಲ್ಲಲು ರಾಜಶಾಸನವಾಗಲೆಂದು ನನ್ನ ಪ್ರಾರ್ಥನೆ ಬಿ ಜಿ ಶಾಸ್ತ್ರಿ

1030 ವಿದ್ಯಾರಣ್ಯಪುರಂ, ಮೈಸೂರು

Oldest Newspaper in the State] — Golden Jubilee 1966]

Sri 'SATYAVADI' Daily

Chamarajapuram, Mysore 4

ವುತ್‌ಲಾಂಡ್ 26-3-65 ರಿಂದ
ಶಿ ನ್ ಅಮೋಘ ವಾರ್ತಾರಂಭ

ಬೊಬ್ಬಾಯಿನಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ
ಅತ್ಯಮೋಘ ಹಿಂದಿ ಚಿತ್ರ ಇತ್ತ

ಬಹು ಬೇಟಿ ★ Bahu Beti

ಚಿತ್ರ- ಅಶೋಕಕುಮಾರ್, ಮೀನಾಕುಮಾರಿ, ಜಾಯ್ ಮುಖರ್ಜಿ, ಪ್ರಹಪ್ರಹ್
ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜಯಪ್ರದ 4 ನೇ ವಾರ

ನಾಗಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್
ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI
SUDHA

A Superb Tonic



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M Si Krishna Rao
the Satyavadi Press, Chamarajapuram, Mysore 4